

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

## ಶತಮಾನೋತ್ಸವ ಸಂಭ್ರಮ

## ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಕ್ರೀಡಾಕೂಟ



ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಶತಮಾನೋತ್ಸವದ ಅಂಗವಾಗಿ ಸ್ಥಾನಿಕ ಸಮಾಜ ಬಾಂಧವರ ಕ್ರೀಡಾಕೂಟ ನಡೆಯಿತು. ಉರ್ವಾ ಕೆನರಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಈ ಕ್ರೀಡಾಕೂಟದ ಉದ್ಘಾಟನೆಯನ್ನು ಲಯನ್ಸ್ ಕ್ಲಬ್ ಮಂಗಳೂರು ಇದರ ಅಧ್ಯಕ್ಷ ಶ್ರೀ ಲಯನ್ ಪಿ. ಎಸ್. ಪ್ರಭಾಕರ್ ನೆರವೇರಿಸಿದರು. ಈ ಸಂದರ್ಭದಲ್ಲಿ ಲಯನ್ಸ್ ಜಿಲ್ಲಾ ಗವರ್ನರ್ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ಮಂಗಳೂರು ಕ್ರೀಡಾಕೂಟಕ್ಕೆ ಬಹುಮಾನವನ್ನು ಒದಗಿಸಿದ್ದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ ಅಧ್ಯಕ್ಷ ಎಮ್.ಆರ್. ವಾಸುದೇವ ಅಧ್ಯಕ್ಷತೆ ವಹಿಸಿದ್ದರು. ಯೆನಪೋಯ ಡೆಂಟಲ್ ಕಾಲೇಜಿನ ಪ್ರಾಂಶುಪಾಲ ಡಾ। ಬಿ.ಎಚ್.ಶ್ರೀಪತಿ ರಾವ್ ಮುಖ್ಯ ಅತಿಥಿಯಾಗಿದ್ದರು. ವೇದಿಕೆಯಲ್ಲಿ ಸಭಾದ ಕಾರ್ಯದರ್ಶಿ ಕರುಣ್‌ರಾವ್ ಬೆಳ್ಳೆ, ಕ್ರೀಡಾಸಮಿತಿಯ ಚೇತನ್‌ಶರ್ಮ, ಶ್ರೀಮತಿ ಅರುಣಾ ಸೋಮಶೇಖರ್ ಹಾಗೂ ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿ ಡಾ। ಎ.ಪಿ.ಕೃಷ್ಣ ಉಪಸ್ಥಿತರಿದ್ದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಲಾಯಿತು. ಅಧಿಕ ಸಂಖ್ಯೆಯಲ್ಲಿ ಸಮಾಜಬಾಂಧವರು ಭಾಗವಹಿಸಿದ್ದರು.




## ಸ್ಥಾನಿಕ ದ್ರಾವಿಡ ಯುವ ಸಮಾವೇಶ-2007

ಮಂಗಳೂರಿನ ಸುಬ್ರಹ್ಮಣ್ಯ ಸಭಾ ಭವನದಲ್ಲಿ ತಾ.09-12-2007ರಂದು 9ನೇ ಸ್ಥಾನಿಕ ಬ್ರಾಹ್ಮಣ ಯುವ ಸಮಾವೇಶವು ಪೂರ್ವಾಹ್ನ ವಿವಿಧ ಸ್ಪರ್ಧೆಗಳೊಂದಿಗೆ ಪ್ರಾರಂಭಗೊಂಡು ವಿಜೃಂಭಣೆಯಿಂದ ನಡೆಯಿತು.

ಮಂಗಳೂರಿನ ಯುವಕರು 8 ವರ್ಷಗಳ ಹಿಂದೆ ಪ್ರಾರಂಭಿಸಿದ ಈ ಸಂಘಟನೆಯು ದೂರದ ಪುತ್ತೂರು, ಪಾವಂಜೆ, ಉಡುಪಿ ಹಾಗೂ ಸುಬ್ರಹ್ಮಣ್ಯ ಸಭೆ, ಮಂಗಳೂರುಗಳಲ್ಲಿ ನಿರಂತರ ಜರಗಿ ಈ ಬಾರಿ ಸುಬ್ರಹ್ಮಣ್ಯ ಸಭೆಯಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಕ್ರೀಡಾ ಪಟು ಪದ್ಮನಾಭ ಭಂಡಿಯವರು "ಯುವ ಜನತೆಯಲ್ಲಿ ಆರೋಗ್ಯ ಮತ್ತು ದೈಹಿಕ ಕ್ಷಮತೆ ಕ್ಷೀಣಿಸುತ್ತಿದೆಯೇ" ಎಂಬ ವಿಷಯದ ಬಗ್ಗೆ ಕಾರ್ಯಕ್ರಮ ನಡೆಸಿಕೊಟ್ಟರು. ಅಪರಾಹ್ನ ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾದ ಎಮ್.ಆರ್.ವಾಸುದೇವ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಅಶೋಕ್‌ರಾವ್, ಕಟಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಶ್ರೀ ರಾಮಕೃಷ್ಣಯ್ಯ, ಡೈರೆಕ್ಟರೇಟ್ ಆಫ್ ರೆವಿನ್ಯೂ ಇಂಟಲಿಜೆನ್ಸ್ ಆಗಮಿಸಿ ಯುವಕರಿಗೆ ಮಾರ್ಗದರ್ಶನ ಮಾಡಿದರು. ವೇದಿಕೆಯಲ್ಲಿ ಸಮಾವೇಶದ ಪ್ರಾಯೋಜಕರಾದ ಹರ್ಷಕುಮಾರ್ ಕೇದಿಗೆ, ಸಮಾವೇಶದ ಅಧ್ಯಕ್ಷರಾದ ಶ್ರೀಹರಿ ಅದ್ಯಪಾಡಿ, ಕಾರ್ಯದರ್ಶಿ ಸುಬ್ರಹ್ಮಣ್ಯ ಶ್ಯಾರಾ ನಟ್ಟೋಜಿ ಹಾಗೂ ಉಪಾಧ್ಯಕ್ಷರುಗಳಾದ ಕುಮಾರಿ ಅಲಕಾ, ಕುಮಾರಿ ಅಶ್ವಿನಿ, ಕುಮಾರಿ ಸ್ವಾತಿ ಉಪಸ್ಥಿತರಿದ್ದರು. ಶ್ರೀಹರಿ ಅದ್ಯಪಾಡಿ ಸ್ವಾಗತಿಸಿದ ಈ ಕಾರ್ಯಕ್ರಮವು ಕುಮಾರಿ ಸ್ವಾತಿಯವರ ಧನ್ಯವಾದದೊಂದಿಗೆ ಸಂಪನ್ನಗೊಂಡಿತು.

## ಉಡುಪಿಯಲ್ಲಿ ನಡೆದ ಸ್ಥಾನಿಕ ಸಾಹಿತ್ಯ ಸಮ್ಮೇಳನ

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ನಮ್ಮ ಸಮಾಜದ ಹಿರಿಯ ಚೇತನ, ಆಶುಕವಿ, ಹರಿದಾಸ ದಿ। ಪಾವಂಜೆ ಲಕ್ಷ್ಮೀನಾರಾಯಣಪ್ಪನವರ ದೇವರ ನಾಮಗಳನ್ನು ಉದ್ಘಾಟಕರಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನೀಲಾವರ ಲಕ್ಷ್ಮೀನಾರಾಯಣರಾವ್‌ರವರು ಹಾಡಿ ಸಮ್ಮೇಳನವನ್ನು ಉದ್ಘಾಟಿಸಿದರು.

ಕೆಲವು ಹಾಡುಗಳು- ಉಡುಪಿ ತಾಲೂಕು ಬಾರಕೂರು ಭಟ್ಟಿ ವಿನಾಯಕನ ಸ್ತುತಿ ಪದ್ಯ. ಈ ಪದ್ಯ ಯಕ್ಷಗಾನದ ಗಣಪತಿ ಸ್ತುತಿಯಾಗಿ ರಾರಾಜಿಸುತ್ತಿರುವುದು ನಮ್ಮ ಸಮಾಜದ ಬಾಂಧವರಿಗೆ ಹೆಮ್ಮೆಯ ಸಂಗತಿ.

**ರಾಗನಾಟಿ ಆದಿತಾಳ :** ವಾರಣ ವದನ। ತ್ರೈಲೋಕ್ಯಸುಮೋಹನ। ವಾರಣವದನ। ವಾರಣಾಸ್ಯವರದಾಯಕ ಸನ್ನುತ। ನಾರದಾದಿಮುನಿ ವಂದಿತ ಪದಯುಗ

ಸುಂದರಾಂಗ ಸುಕಲಾನ್ವಿತ ಶುಭಚರಣ। ಕಟಿ ಶೋಭಿತ ವ್ಯಾಳಸ ಬಂಧನಾಬ್ದಿಶತಕೋಟಿ ಸದೃಶಕಿರಣ ॥ ಚಂದನಾಂಗಾರ್ಚಿತ ಸುಮನೋಹರ। ಮಂದಹಾಸ ಮಹಿಮಾಂಬುಧಿ ಚಂದಿರ ॥

ಕಂಬುಗ್ರೀವ ಕಮನೀಯ ಕರಾಂಬುರಾಹಾ ಪಾಶಾಂಕುಶಧರ ವರ ಶಂಬರಾರಿಜತುತನಯ ಮಧುರಗೇಹ ಜಂಭವೈರಿ ವಿನುತಾಮರವಂದಿತ ಲಂಬೋದರ ವಿಘ್ನಾಂಬುಧಿಕುಂಭಜ ॥

ಚಾರು ಬಾರ ಕನ್ಯಾಪುರವರನಿಲಯ। ಮೃಕಂಡುಜ ಋಷಿವರಸಾರಮಂತ್ರ ಸ್ಥಾಪಿತ ಮಂಗಲಕೆರೆಯು ಸಾರಕಪಿತ್ಥಲೋರಸ ಭುಂಜಿತು ಧೀರ ಲಕ್ಷ್ಮೀನಾರಾಯಣ ಸಖಸುತ ॥ ವಾರಣವದನ। ತ್ರೈಲೋಕ್ಯಸುಮೋಹನ ವಾರಣವದನ ॥

ನೀಲಾವರ ಮಹಿಷಮರ್ದಿನಿ ದೇವಸ್ಥಾನಕ್ಕೆ ಬಂದಾಗ ಹಾಡಿದ ಪದ್ಯ (ದೇವಿಸ್ತುತಿ)

**ರಾಗ-ಶಂಕರಾಭರಣ-ಆದಿತಾಳ :** ಜಗದೊಳು ನೀನೇ ಜಗಜ್ಜನನೀ ಮುಕಾಂಬಿಕೆ। ದನುಜ ಮಹಿಷಮರ್ದಿನಿ। ಮುಕಾಂಬಿಕೆ। ದನುಜ ಮಹಿಮರ್ದಿನೀ ॥

ಅಗಿಲು ಚಂದನಗಂಧಿ। ಅವರಸಂಕುಲವಂದ್ಯೆ। ನಿಗಮತಲೆವಿನೊಳದೆ। ನಿರುಪಮೆ ಚಾರಿತ್ರೆಶರ್ವಾಣಿ।

ಆದಿಶಕ್ತಿಬೋಧರುಪೆ। ನಾದಬಿಂದುಕಲಾತೀತೆ ವೇದವೇದ್ಯವಾಸವಾದಿ ವಂದಿತಾಂಘ್ರಿಸರೋರುಹೆ ಮೋದಪುರಿವಾಸ ವರದೆ ಶುಭೋದಯೆ ಸುಂದರಿ ಶರ್ವಾಣಿ।

ವಾರಿಪುರವಾಸವರದೇ ಕಾರಣಿಕ ಕಂಜನಯನೆ। ನಾರದಾದಿ ಋಷಿವಂದ್ಯೆ। ಧೀರಗಾಲವಾ ಪೂಜಿತೆ। ಮಾರಕೊಳಚಿ ರೂಪೆ। ಲಕ್ಷ್ಮೀನಾರಾಯಣನ ಸಹೋದರಿ ಶರ್ವಾಣಿ

**ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟವರು :** ಹಾಡುಗಾರಿಕೆ - ಕುಮಾರಿ ಅಶ್ವಿನಿ ಶಾಸ್ತ್ರಿ ಬ್ರಹ್ಮಾವರ, ಏಕಪಾತ್ರಾಭಿನಯ - ಮಾ। ಬಿ. ಶ್ರೀಕಂಠರಾವ್ ತೆಕ್ಕಟ್ಟೆ, ಕೂಚಿಪುಡಿ ನೃತ್ಯ - ಕುಮಾರಿ ಅಕ್ಷತಾ ಶರ್ಮ ಪಡುಬಿದ್ರಿ, ಕಾರ್ಯಕ್ರಮ ನಿರೂಪಣೆ - ಶ್ರೀಮತಿ ಪ್ರಸನ್ನಾ ಪ್ರಕಾಶ್‌ರಾವ್ ಮಣಿಪಾಲ.

**ಛಾಯಾಚಿತ್ರ ಪ್ರದರ್ಶನ :** ಸಾಹಿತ್ಯ ಸಮ್ಮೇಳನದ ದಿನ ಉಡುಪಿಯ ಶಾರದಾ ಮಂಟಪದಲ್ಲಿ ಕಲಾವಿದರಾದ ಕೆ. ದಿನಮಣಿ ಶಾಸ್ತ್ರಿ ಬ್ರಹ್ಮಾವರ, ರಘುವೀರ ಪೆರ್ಡೂರು, ಶ್ವೇತಾ ಶಾಸ್ತ್ರಿ ಸೌರವ್ ಶಾಸ್ತ್ರಿ ಮೊದಲಾದವರ ಛಾಯಾ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಸಮ್ಮೇಳನಾಧ್ಯಕ್ಷರಾದ ಶ್ರೀ ಎ. ಈಶ್ವರಯ್ಯ ಛಾಯಾಚಿತ್ರಗಳನ್ನು ವೀಕ್ಷಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.



ಶತಮಾನೋತ್ಸವ ಸಂಭ್ರಮಕ್ಕೆ ಶುಭಕೋರುವ

**Sharekhan**
Navadurga Share Services
Mangalore-575 101
Prop. : PRADEEP RAO K.
Tel. : 2441318/2412901/02/03/20/21

**RAMA Automobiles**
Mangalore-575 006.
Prop. : U. SANTHOSH KUMAR
Tel. :2454355

**SUMAN PUBLICATIONS**
Mangalore-575 027
SMT. SUMAN KRISHNA
Proprietor

**Vishram Motors (P) Ltd.**
Mangalore-575 003.
ANIL RAO B. S.
Managing Director
Tel. :2440110 (O), 2213946 (R)

**NAVA COMPUTERS**
Mangalore - 5
Prop. : MANISH RAO U.
Mobile : 94487 26499